
ಎಷ್ಟೊಂದು ಕಷ್ಟಪಟ್ಟಿದ್ದಾರೆಂಬುದು ಸ್ಪಷ್ಟವಾಗಿಯೇ ಅರಿವಾಗುತ್ತದೆ. ಜಯಂತ ಕಾಯ್ಕಿಣಿಯವರ ರೂಪಕ ಭಾಷೆಯನ್ನು, ಬೇಂದ್ರೆಯವರ 'ಭಾಷೆಯನ್ನು ಅರ್ಥದ ಹಂಗಿನಿಂದ ಪಾರು ಮಾಡುವ' ಸ್ವಾತಂತ್ರ್ಯವನ್ನು ಇನ್ನೊಂದೇ ಭಾಷೆಯಲ್ಲಿ ಮರುಸೃಜಿಸುವುದು ಕಷ್ಟ ಅಲ್ಲ, ಅಸಾಧ್ಯ. ಒಂದು ಭಾಷೆಯಲ್ಲಿ ಕವಿ ಸಹಜವಾಗಿ, ಸ್ವಯಂಸ್ಫೂರ್ತಿಯಿಂದ ನುಡಿದಿದ್ದನ್ನು ಇನ್ನೊಂದು ಭಾಷೆಯಲ್ಲಿ ಹೇಳಲು ಅನುವಾದಕ ತಿಣುಕಬೇಕಾಗುತ್ತದೆ ಮತ್ತು ಹಾಗೆ ಮಾಡಿದ ತಕ್ಷಣವೇ, ಮೂಲಭಾಷೆ ಬಲ್ಲವನಿಗೆ ಅದು ಕ್ಲೀಷೆಯಾಗಿ ಕಾಣುತ್ತದೆ. ಇದು ಅನುವಾದದ ಮಿತಿ. ಹಾಗಾಗಿ, ಹಿಂದಿ ಕಾದಂಬರಿಯ ಎರಡರಷ್ಟು ಪುಟಗಳ ಗಾತ್ರಕ್ಕೆ ಇಂಗ್ಲಿಷ್ ಅನುವಾದ ಹಿಗ್ಗಿದೆ. ಕಾದಂಬರಿಯನ್ನು ಹಿಂದಿಯಲ್ಲಿ ಓದಬಲ್ಲ ಯಾರೂ ಅದನ್ನು ಇಂಗ್ಲಿಷಿನಲ್ಲಿ ಓದುವುದಿಲ್ಲ ಮತ್ತು ಓದಿದರೂ ಇಷ್ಟಪಡುವುದಿಲ್ಲ ಎಂಬ ಮಾತು ಸತ್ಯಸ್ಯ ಸತ್ಯ. ಇಂಗ್ಲಿಷ್ ಮಾತ್ರ ಎಟುಕಬಲ್ಲ ಓದುಗರಿಗೆ ಅನುವಾದ ಮೋಸ ಮಾಡುವುದಿಲ್ಲ.

ಕಾದಂಬರಿಗೆ ವೇಗ ಒಂದು ಧನಾತ್ಮಕ ಗುಣ. ಅದು ಕುಂಟಿದಷ್ಟೂ, ನಿಧಾನಗತಿ ಹಿಡಿದಷ್ಟೂ ಓದುಗ ನಿರಾಸಕ್ತನಾಗುವ, ಆಕಳಿಸುವ, ಅನ್ಯಮನಸ್ಕನಾಗುವ ಅಪಾಯವಿದೆ. 'ಟೊಂಬ್ ಆಫ್ ಸ್ಯಾಂಡ್' ಕಾದಂಬರಿ ಅನುಸರಿಸುವುದು ನಿಧಾನಗತಿಯನ್ನು. ಆದರೆ, 'ರೆತ್ ಸಮಾಧಿ' ಅನುಸರಿಸುವುದು ಕಾವ್ಯಾತ್ಮಕ ನಿರೂಪಣೆಯನ್ನು. ಗೀತಾಂಜಲಿ ಶ್ರೀಯವರ ಹಿಂದಿಯನ್ನು ಒಮ್ಮೆ ಓದಿದಿರೆಂದರೆ ಅದರ ಶಾಯರಿ ಶೈಲಿಗೆ ಯಾರಾದರೂ ಮರುಳಾಗಿ ಬಿಡುತ್ತಾರೆ. ಸ್ವತಃ ಯಾವುದೋ ನಶೆಯಲ್ಲಿದ್ದವರಂತೆ ಅವರು ನಿರೂಪಿಸುತ್ತಾರೆ. ಉರ್ದುವಿನ ಯಾವುದೋ ಶಾಯರಿ ಕೇಳಿದಂತೆ ಇಡೀ ಕಾದಂಬರಿಯನ್ನು ಒಂದಿಷ್ಟೂ ನಿಲುಗಡೆಯಿಲ್ಲದೆ ಓದಿ, ಅಲ್ಲ, ಕುಡಿದು ಪಾನಮತ್ತರಾಗಬಹುದು. ಅಂಥ ವೇಗ, ಶಾಬ್ದಿಕ ಮೋಡಿ, ಚಲನೆಯ ಲಾಲಿತ್ಯ ನೃತ್ಯವಾಗುವ ಮಾಯಕತೆ ಅವರ ಹಿಂದಿಗಿದೆ. ಈ ಮಾತು ಕಾದಂಬರಿಯ ಒಂದಿಷ್ಟು ಆರಂಭಿಕ ಪುಟಗಳಿಗೋ, ಕೆಲವು ಅಧ್ಯಾಯಗಳಿಗೋ ಅನ್ವಯಿಸುವುದಿಲ್ಲ.




ಇಡೀ ಕಾದಂಬರಿಯ ಅಂತರಾತ್ಮವೇ ಈ ಕಾವ್ಯಾತ್ಮಕ ನೆಲೆಯ ನಿರೂಪಣೆ. ಇಂಗ್ಲಿಷ್ ಅದನ್ನು ಅನುಸರಿಸಲು ಇನ್ನಿಲ್ಲದಂತೆ ಪ್ರಯತ್ನಿಸುತ್ತದೆ. ಇನ್ನುಳಿದಂತೆ ಲ್ಯೊಪಾರ್ದಿಯ ಮಾತುಗಳಿವೆ. ಇದು ಇತಾಲೊ ಕೆವಿನೊ ಹೇಳುವ ವೇಗದ ನಿರೂಪಣೆಗೂ, ಭಾಷೆಯ ಕಾವ್ಯಾತ್ಮಕ ಲಯಕ್ಕೂ ಸಂಬಂಧಿಸಿದ ವಿಚಾರ. ಗೀತಾಂಜಲಿ ಶ್ರೀಯವರ ನಿಧಾನಗತಿಯ ನಿರೂಪಣೆಯ ಇಂಗ್ಲಿಷ್ ಆವೃತ್ತಿ ಮತ್ತು ಅವರದೇ ಕಾವ್ಯದ ನಶೆ ಹತ್ತಿಸಬಲ್ಲ ಸುಂದರ ಹಿಂದಿಯ ಆವೃತ್ತಿ ಎರಡೂ ಇದನ್ನು ಕಾಣಲು ನಮಗೆ ನೆರವಾಗಬೇಕು.

ಇನ್ನು ಅನಗತ್ಯ ವಿವರಗಳ ಮಾತು. ಸಹಜವಾಗಿಯೇ 370 ಪುಟಗಳ ಹಿಂದಿ ಕಾದಂಬರಿ ಇಂಗ್ಲಿಷಿನಲ್ಲಿ 725 ಪುಟಗಳಿಗೆ ಹಿಗ್ಗಿರುವ ಬಗ್ಗೆ ಅಪಸ್ವರಗಳಿವೆ. ಸಾಕಷ್ಟು ಅನಗತ್ಯವೆನಿಸುವ ಭಾಗಗಳಿವೆ ಈ ಕಾದಂಬರಿಯಲ್ಲಿ ಎಂದು ಇಂಗ್ಲಿಷ್ ಆವೃತ್ತಿ ಓದಿರುವ ಪಾಶ್ಚಾತ್ಯ ವಿಮರ್ಶಕರು ಗೊಣಗಿದ್ದಿದೆ. ಆದರೆ, ಅನಗತ್ಯ ವಿವರಗಳು ಏಕಾಗಿ ಇವೆ ಮತ್ತು ಅವುಗಳ ಬಗ್ಗೆ ಕೃತಿಕಾರರಿಗೆ ಅರಿವಿಲ್ಲವೆ ಎನ್ನುವ ಪ್ರಶ್ನೆ ಕೇಳಿಕೊಳ್ಳಬೇಕು. ಅನುಭವಿ ಕೃತಿಕಾರನೊಬ್ಬ ತನ್ನ ಪ್ರಕಟಿತ ಕೃತಿಯಲ್ಲಿ ಇರಬೇಕು ಎಂದು ಪ್ರಜ್ಞಾಪೂರ್ವಕವಾಗಿ ಉಳಿಸಿಕೊಂಡಿರುವ ಯಾವ ಭಾಗವೂ ಅನಗತ್ಯವಾಗಿರುವುದಿಲ್ಲ. ಅವುಗಳ